ಬೆಂಗಳೂರು ಡಿಸ್ಟ್ರಿಕ್ಟ್.

ಬೆಂಗಳೂರು ಸಬ್‌ಜಡ್ಜ್‌ರ್‌ಯವರ ಕೋರ್ಟಿನಲ್ಲಿ.

1885ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 454.

ಮೃತಪಟ್ಟ ವೆಂಕಟಕೃಷ್ಣಯ್ಯಂಗಾರ್ ವೆರಪ್ಪ ಅಪ್ಪಾಜಯ್ಯಂಗಾರ್, ಜೆಂಜತಿ ತಿಂಗಮ್ಮನು ಜ್ಞಾತಿ ಆಗಬೇಕೆಂಬ ಹಕ್ಕುದಾರೀ ಮೇಲೆ ಕ್ಲೋಸ್ ಪೇಟೆ ತಾಲ್ಲೂಕು ಮಳೂರಲ್ಲಿ ಯಿರುವ ಅಪ್ಪಾಜಯ್ಯಂಗಾರ್ರ ಮಗ ಅಪ್ಪಮಯ್ಯಂಗಾರ್ ಎಂಬವನು ಸದರೀ ವಾಸಸ್ಥಳಾಗಿ ಮೃತಪಟ್ಟ ತಿಂಗಮ್ಮನ ಜೆಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಸಾಲವನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಅಪ್ಪಮಯ ಎಂಬವರ ಅರ್ಜೀಯನ್ನು 1885ನೇ ಇಸವಿ ನವಂಬರ್ 6ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೇಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತಿಂಗಮ್ಮನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

1885ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 466.

ಮೃತಪಟ್ಟ ವೆಂಕೋಬ ಕರಿಯಣ್ಣನಿಗೆ ಮಗ ಆಗಬೇಕೆಂಬ ಹಕ್ಕುದಾರಿ ಮೇಲೆ ತುಮಕೂರು ಡಿಸ್ಟ್ರಿಕ್ಟು ಗುಬ್ಬಿ ತಾಲ್ಲೂಕು ಚಿಟ್ಟನಹಳ್ಳಿ ಸಮ್ಮತು ನೆಟ್ಟಕೆರೆ ಗ್ರಾಮದಲ್ಲಿ ಯಿರುವ ಚಂದನಸೆಂಬವನು ಸದರೀ ಗ್ರಾಮದಲ್ಲಿ ವಾಸಸ್ಥನಾಗಿ ಮೃತಪಟ್ಟ ತನ್ನ ತಂದೆ ವೆಂಕೋಬ ಕರಿಯಣ್ಣನ ಜೆಂದಗಿ ಬಗ್ಯಾಗಿ ಬರತಕ್ಕ 100 ರೂಪಾಯಿ ಲೇವಾದೇವಿಯನ್ನು ವಸೂಲ್ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟು ಪ್ರಕಾರ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಚಂದನ ಅರ್ಜೀಯನ್ನು 1885ನೇ ಇಸವಿ ನವಂಬರ್ ತಿಂಗಳು 13ನೇ ತಾರೀಖಿನಲ್ಲಿ ಕೇಳಿ ಸರಟಿಫಿಕೇಟ್ ಪಡಿಯತಕ್ಕ ಬಾಧ್ಯತೆ ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ವೆಂಕೋಬ ಕರಿಯಣ್ಣನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ತಾರೀಖು 15ನೇ ಮಾಹೆ ಅಕ್ಟೋಬರ್ 1885ನೇ ಇಸವಿ ಮೊಕ್ತಾಂ ಬೆಂಗಳೂರು.

1885ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 467.

ಮೃತಪಟ್ಟ ತುಂಬೇಗೌಡನ ಆಸ್ತಿ ವಿಷಯದಲ್ಲಿ—

ಅರ್ಜೀದಾರ್ ಭೈರಪ್ಪ, ಮೃತಪಟ್ಟ ದೊಡ್ಡಬಳ್ಳಾಪುರದ ತಾಲ್ಲೂಕು ದೊಡ್ಡಪೆಜ್ಜಾಜಿ ಗ್ರಾಮದ ತುಂಬೇಗೌಡನಿಗೆ ಮಗನಾಗಬೇಕೆಂಬ ಹಕ್ಕುದಾರೀ ಮೇಲೆ ಸದರೀ ದೊಡ್ಡಬಳ್ಳಾಪುರದ ತಾಲ್ಲೂಕು ದೊಡ್ಡ ಪೆಜ್ಜಾಜಿ ಗ್ರಾಮದ ಭೈರಪ್ಪನು ಸದರೀ ವಾಸಸ್ತನಾಗಿ ಮೃತಪಟ್ಟ ತುಂಬೇಗೌಡನ ಜೆಂದಗಿ ಬಗ್ಯಾಗಿ ಬರತಕ್ಕ 200 ರೂಪಾಯಿ ಲೇಣಿಯನ್ನ ವಸೂಲ್ ಮಾಡಿಕೊಳ್ಳುವದಕ್ಕೆ 1860ನೇ ಇಸವಿ 27ನೇ ಆಕ್ಟು ಮೇರಿಗೆ ಸರಟಿಫಿಕೇಟ್ ಬ್ಯೈ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾನೆ.

ಸದರೀ ದರಖಾಸ್ತುದಾರನಾದ ಭೈರಪ್ಪನ ಅರ್ಜೀಯನ್ನು 1885ನೇ ಇಸವಿ ನವಂಬರ್ ತಿಂಗಳು 24ನೇ ತಾರೀಖಿನಲ್ಲಿ ಕೇಳಿ ಸರ್ಟಿಫಿಕೆಟ್ ಪಡಿಯತಕ್ಕ ಬಾಧ್ಯತೆಯು ವಿಮರ್ಶೆಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ತುಂಬೇಗೌಡನ ಆಸ್ತಿಗೆ ಹಕ್ಕುದಾರರಾದ ವಿಷ್ಯರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇದೆ.

ತಾರೀಖು 26ನೇ ಅಕ್ಟೋಬರ್ 1885ನೇ ಇಸವಿ ಮೊಕ್ತಾಂ ಬೆಂಗಳೂರು.

1885ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ್ 290.

ದಿವಾಳಿಯಾದ ಡಿಕ್ರಿ ವೇಣೇದಾರ ನೆಲಮಂಗಲ ತಾಲ್ಲೂಕು ಕಾಚೋಹಳ್ಳಿ ಗ್ರಾಮದಲ್ಲಿ ಯಿರುವ ಚಿದ್ದಲಿಂಗಮ್ಮನ ವಿಷಯದಲ್ಲಿ—

ಈ ವಿಷಯವು ಸಬ್ ಜಡ್ಜ್‌ರ್‌ಯವರಾದ ಮೆ॥ ಕೈಸ್ ಸಾಹೆಬರವರ ರೂಬರೂ ದಿವಾಳಿಯಾದವಳೆ ಖುದ್ದು ಸಮಕ್ಷವುಬಲ್ಲಿಯೂ ಮೇಲ್ಕಂಡ ದಿವಾಳಿಯಾದವಳ ಲೇಣೇದಾರರಾದ 1ನೇ ಅಲ್ಲಿಸಾಬಿ, 2ನೇ ಮುನಿಯಪ್ಪ, 3ನೇ ನಂಜಯ್ಯ, ಇವರಗಳು ಗೈರ್ ಹಾಜರು, 1ನೇ ಲೇಣೇದಾರ ಇಕ್ಕಲಿಲ್ಲ.

ಅರ್ಜೀದಾರಳನ್ನ ಎಕ್ಸಾಮಿನ್ ಮಾಡಲ್ಪಟ್ಟಿತು. ಸ॥ 1885ನೇ ಇಸವಿ ಆಗಸ್ಟು 3ನೇ ತಾರೀಖಿನ ಬಾಬತು ದಿವಾಳಿಯಾದವಳ ಜೆಂದಗಿ ರಿಸೀವರ ಸರಟಿಫಿಕೇಟನ್ನ ಓದಲಾಯಿತು. ಇದೇವಿಷಯದಲ್ಲಿ ಈ ಕೋರ್ಟಿನಿಂದ ಸ॥ 1885ನೇ ಇಸವಿ ಸೆಪ್ಟಂಬರ್ 10ನೇ ಹಾ

ರೀಬಿನಲ್ಲಿ ಮಾಡಲ್ಪಟ್ಟ ಹುಕ್ಕುಂ ಮೇರೆ ಪಟ್ಟಿಯಲ್ಲಿ ನಮೂದಾದ ಮೇಲ್ಕಂಡ ದಿವಾಳಿಯಾದವಳ ದೇಣಿಗಳು 200 ರೂಪಾಯಿಗಳಿಗೆ ವಿಾರದೆ ಇರುತ್ತವೆ. ಆದಕಾರಣ ಸದರೀ ದಿವಾಳಿಯಾದವಳು ಐಯಿಂದ ಆ ದೇಣಿಗಳಿಗೆ ವಿಷ್ಯ ಖುದ್ದು ಜವಾಬ್‌ದಾರಿಯಿಂದ ತಪ್ಪು ಇರುವದಲ್ಲದೆ ಇನ್ನು ಮುಂದೆ ಅವಳಿಂದ ಸಂಪಾದಿಸಲ್ಪಡುವ ಜೆಂಬಗಿಯು ಆ ದೇಣಿಗಳಿಗೆ ಗುರಿಯಾಗುವದಿಲ್ಲವೆಂದು ನಿರ್ಣಯಿಸಲ್ಪಟ್ಟಿರುತ್ತದೆ.

1885ನೇ ಇಸವಿ ಮಿಸಲೇನಿಯಸ್ ಅರ್ಜೀ ನಂಬರ 320.

ದಿವಾಳಿಯಾದ ಡಿಸ್ಟ್ರಿ ವೇನೇವಾರ ಚಿಕ್ಕಬಳ್ಳಾಪುರದಲ್ಲಿ ಯಿರುವ ಸಂಚಿಳದ ದೆಳವಾರ್ನಹಳ್ಳಿ ವೆಂಕಟರಮಣಪ್ಪನ ಮಗ ಕೇಷಪ್ಪನ ವಿಷಯದಲ್ಲಿ—

ಈ ವಿಷಯವು ನಬ ಜಡ್ಜ್‌ರಯವರಾದ ಮೊ ಕೈಸ್ ಸಾಹೇಬರವರ ರೂಬರೂ ದಿವಾಳಿಯಾದವನ ಸಮಕ್ಷವುವಲ್ಲಿಯೂ ಮೆ ದಿವಾಳಿಯಾದವನ ಲೇಕೇದಾರರಾದ ಚಿಕ್ಕಬಳ್ಳಾಪುರದಲ್ಲಿ ಯಿರುವ ಕೆಂಪಂಣನ ಮಗ 1ನೇ ಚನ್ನಪ್ಪ, 2ನೇ ಕಿಷ್ಟಪ್ಪದಲ್ಲಿ ಯಿ ಮುನಿ ರುದ್ರಪ್ಪ, 3ನೇ ಚಿಕ್ಕಬಳ್ಳಾಪುರ ತಾಲ್ಲೂಕು ಅಂಕಣಗೊಂದಿ ಅರ್ಚಕ ರಾಮಾನುಜಾಚಾರಿ, 4ನೇ ಚಿಕ್ಕಬಳ್ಳಾಪುರದಲ್ಲಿ ಜವಳಿ ನೂಬ್ಬಾಷಾಸ್ತ್ರಿ ಯಿವರುಗಳು ಹಾಜರಾಗಲಿಲ್ಲ.

ಅರ್ಜೀದಾರನ್ನ ದೆಕ್ಲೇಷ್ಟ್ರೀ ಮಾಡಲ್ಪಟ್ಟಿತು. ಸ್ಯ 1885ನೇ ಇಸವಿ ಆಗಷ್ಟು 15ನೇ ತಾರೀಖಿನ ಬಾಬತು ದಿವಾಳಿಯಾದವ ಗಿ ಸರಟಿಫಿಕೇಟನ್ನ ಓದಲಾಯಿತು. ಇದೇ ವಿಷಯದಲ್ಲಿ ಈ ಕೋರ್ಟಿನಿಂದ 1885ನೇ ಇಸವಿ ಸೆಪ್ಟಂಬರ್ 17ನೇ ತಾರೀಖಿನಲ್ಲಿ ಲ್ಪಟ್ಟ ಹುಕ್ಕುಂ ಮೇರೆ ಪಟ್ಟೀಯಲ್ಲಿ ನಮೂದಾದ ಮೇಲ್ಕಂಡ ದಿವಾಳಿಯಾದವನ ದೇಣಿಗಳು 200 ರೂಪಾಯಿಗಳಿಗೆ ವಿಾರದೆ ಆದಕಾರಣ ಸದರೀ ದಿವಾಳಿಯಾದವನು ಐಯಿಂದ ಆ ದೇಣಿಗಳಿಗೆ ವಿಷ್ಯ ಖುದ್ದು ಜವಾಬ್‌ದಾರಿಯಿಂದ ತಪ್ಪು ಇರುವದಲ್ಲದೆ ಅವನಿಂದ ಸಂಪಾದಿಸಲ್ಪಡುವ ಜೆಂಬಗಿಯು ಆ ದೇಣಿಗಳಿಗೆ ಗುರಿಯಾಗುವದಿಲ್ಲವೆಂದು ನಿರ್ಣಯಿಸಲ್ಪಟ್ಟಿರುತ್ತದೆ.

ಸ್ಯ 1885ನೇ ಇಸವಿ ಅಕ್ಟೋಬರ್ ತಾ|| 12ನೆ ಕೋರ್ಟು ಮೊಹರ್ ನಮ್ಮ ದಸ್ತಖತ್ತಿನಿಂ ಕೊಡಲ್ಪಟ್ಟಿತು.

ಸಿ. ಕೆ
ಸಿ

ಕಡೂರು ಡಿಸ್ಟ್ರಿಕ್ಟು.

ಕಡೂರು ಡಿಸ್ಟ್ರಿಕ್ಟು ಕೊಪ್ಪದ ತಾಲ್ಲೂಕು ತ್ರಿಂಗೇರಿ ಗ್ರಾಮದಲ್ಲಿ ವೈಶ್ಯರ ಮೂಡ್ಲಗಿರಿ ವೆಂಕಟರಮಣಯ್ಯನ ಮನೆ ಲಿ ದಕ್ಷಿಣ ಪಾರ್ಶ್ವದ ಕೋಣೆಗೆ ಸ್ಯ 1885ನೇ ಇಸವಿ ಸೆಪ್ಟಂಬರ್ 17ನೇ ತಾರೀಖಿನ ರಾತ್ರಿ ಯಾರೋ ಕನ್ನಾಹಾಕಿ ಹಿತ್ತಾಳೆ ದವಳಗೆ ಯಿದ್ದ ಮಾಲ್ ಕಳವು ಮಾಡಿಕೊಂಡು ಹೋದ ಬಾಬತು ಫಿರ್ಯಾದಿ ಹೇಳುವ ಮಾಲ್ ತಪಸೀಲ್‌ಪಟ್ಟಿ.

ನಂಬರ್.		ರೂ.		
1.	ಜೊಕ್ಕಭಂಗಾರದ ಪಟ್ಟಿ ಹಿಂಬಳಿ ಜೊತೆ 1ಕ್ಕೆ ಆರವತ್ತು ವರಹಾ ತೂಕ, ಹಿಂಬಳಿ 1ಕ್ಕೆ ಗಿಣಿ 6 ಹುವ್ವೆ 1 ಬುಡದಲ್ಲಿ ಯರಡು ಕೀಲು ಮೇಲೆ ತಿರಪು ಕೀಲು ಈ ಮೇರೆ ಯಿರುವದು.	360	0	
2.	ಮುಳುಕಂಕಣದ ಜೊತೆ 1ಕ್ಕೆ 20 ವರಹಾ ತೂಕ ಜೊಕ್ಕಭಂಗಾರ ಪೈಕಿ 1ಕ್ಕೆ ಕೀಲು ಮುರದು ಯಿತ್ತು.	120	0	0
3.	ತಿಮ್ಮಲಲಾಟದ ಜೊತೆ 1ಕ್ಕೆ ತೂಕ 40 ವರಹಾ, ತಿಮ್ಮಲಲಾಟ 1ಕ್ಕೆ ಕೆಂಪು 10ರಂತೆ ಕೆತ್ತಿ ಕೆಲಸ ಮಾಡಿ ಯಿತ್ತು ಕೆಂಪು ಕೆಲವು ವುದರಿ ಹೋಗಿ ಯಿತ್ತು ಅದು ನೆನಪು ಯಿಲ್ಲಾ .. :	240	0	0
4.	ಜಳಕೆ ಜೊತೆ 1ಕ್ಕೆ ತೂಕ 12 ವರಹಾ, ಜಳಕಿ 1ಕ್ಕೆ ಗುಂಡು 5 ಹವಳ 4 ಮತ್ತೊಂದಕ್ಕೆ ಗುಂಡು 4 ಹವಳ 5 ಈ ಮೇರೆ ಯಿದೆ	72	0	0
5.	ಭಂಗಾರದ ನಾಗಮುರಿ ಜೊತೆ 1ಕ್ಕೆ ಕೇರು ವಂದೂಕಾಲು, ಜೊಕ್ಕಭಂಗಾರದ ಬಾಬತು ಬೊಳ್ಳಿ ಗೆಜ್ಜೆ ಕುಚ್ಚು ವಾಡಿ ಮುರಿ 1ಕ್ಕೆ 5 ಕುಚ್ಚು ಯಿವೆ	600	0	0
6.	ಕಟ್ಟಾಣಿಸರ 1ಕ್ಕೆ ಜೊಕ್ಕ ಭಂಗಾರದ ಬಾಬತು ವಂಭತ್ತು ಯಳೆ ಸರದ ವೈಕೀ ಯಂಟು ಯಳೆ ಯಿದ್ದ ಬಾಬತು ತೂಕ 30 ವರಹಾ ಬಾಬತು	180	0	0
7.	ಗುಂಡಿನಸರಾ 1ಕ್ಕೆ ಜೊಕ್ಕಭಂಗಾರ 15 ವರಹಾತೂಕ ಗುಂಡುಗಳು 79	90	0	0
8.	ಮುತ್ತಿನಗಿಣಿ ಪಾಲೇಜೊತೆ 1ಕ್ಕೆ ಭರ್ತಿಯಾಗಿ ಮುತ್ತು ನುತ್ತಿವೆ	350	0	0